ಓ ಎಸ್ಃ 363/2016

ಪಿ ಡಬ್ಲ್ಯೂ ಃ 1

ದಿನಾಂಕಃ 18.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ವಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಎಸ್ ವಕೀಲರಿಂದಃ**

ನಾನು ನಿ ಪಿ 75 ರಂತೆ ನೀಡಿರುವ ವಂಶವೃಕ್ಷದ ಪ್ರಮಾಣಪತ್ರದಲ್ಲಿ ವಕೀಲರ ಗುರುತಿನ ಸಹಿ ಇರುವುದಿಲ್ಲ ಎಂದರೆ ಸಾಕ್ಷಿ ನಾನು ಕಂದಾಯ ಇಲಾಖೆಯಿಂದ ವಂಶವೃಕ್ಷವನ್ನು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಂಶವೃಕ್ಷ ನೋಟರಿ ಸಹ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಂಶವೃಕ್ಷವನ್ನು ಯಾವ ದಿನಾಂಕ, ಯಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಿ ಪಿ 75 ರಲ್ಲಿ ಮುನಿರಂಗಮ್ಮ ನವರಿಗೆ ತನುಶ್ರೀ ಎಂಬ ಮಗಳು ಇರುತ್ತಾಳೆ ಎಂದು ಹೇಳಲಾಗಿರುವುದಿಲ್ಲ ಎಂದರೆ ಸರಿ. ನಿಪಿ 75 ಪ್ರಮಾಣಪತ್ರವನ್ನು ಯಾರು ಬರವಣಿಗೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಭದ್ರಮ್ಮ ಸದರಿ ಬರವಣಿಗೆಯನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಭದ್ರಮ್ಮ ನವರಿಗೆ ಓದಲು ಬರೆಯಲು ಬರುತ್ತದೋ ಇಲ್ಲವೋ ಗೊತ್ತಿಲ್ಲ. ಭದ್ರಮ್ಮ ನವರು ಸಹಿ ಮಾಡುವುದಿಲ್ಲ, ಅವರು ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಾರೆ. ನಾನು ನ್ಯಾಯಾಲಯಕ್ಕೆ ನೀಡಿರುವ ನಿ ಪಿ 75 ರಲ್ಲಿ ಯಾವುದೇ ಹೆಬ್ಬೆಟ್ಟಿನ ಗುರುತು ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ ತನುಶ್ರೀ ಮುನಿರಂಗಮ್ಮ ನವರ ಮಗಳು ಎಂದು ನಿ ಪಿ 75 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ತನುಶ್ರೀ ಈಗ ಇಂಜೀನಿಯರಿಂಗ್ ಓದುತ್ತಿದ್ದರು. ತನುಶ್ರೀ ರವರ ಶಾಲಾ ದಾಖಲಾತಿಗಳಲ್ಲಿ ಆಂಜನಪ್ಪ ತಂದೆ ಮತ್ತು ಮುನಿರಂಗಮ್ಮ ತಾಯಿ ಎಂದು ತೋರಿಸಲು ಯಾವುದಾದರೂ ದಾಖಲಾತಿಗಳನ್ನು ನೀಡಿರುತ್ತೀರಾ ಎಂದರೆ ಕೊಟ್ಟಿಲ್ಲ. ಆಂಜನಪ್ಪ ನವರಿಗೆ ಪ್ರತಿವಾದಿ 1 ರಿಂದ 5 ರವರು ವಾರಸುದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಮುನಿರಂಗಮ್ಮ ನವರು ಆಂಜನಪ್ಪ ನವರ ಮೊದಲನೆ ಹೆಂಡತಿ ಎಂದು ನುಡಿಯುತ್ತಾರೆ. ಮುನಿರಂಗಮ್ಮ ನವರು 2023 ರಲ್ಲಿ ತೀರಿಕೊಂಡಿರುತ್ತಾರೆ. ಮುನಿರಂಗಮ್ಮ ನವರು ಬದುಕಿದ್ದಾಗ ತನುಶ್ರೀ ತನ್ನ ಮಗಳು ಎಂದು ಹೇಳಲು ಯಾವ ದಾಖಲಾತಿಗಳನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿ ದತ್ತು ಸ್ವೀಕಾರ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದು

ನುಡಿಯುತ್ತಾರೆ. ದತ್ತು ಸ್ವೀಕಾರ ಪತ್ರದಲ್ಲಿ ಆಂಜನಪ್ಪ ನವರು ರುಜು ಮಾಡಿರುವುದಿಲ್ಲ. ನಾನು ನಿ ಪಿ 75 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ ದಾಖಲಾತಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**